**Universal Design for Learning**

# ಕಲಿಕೆಗಾಗಿ ಸಾರ್ವತ್ರಿಕ ವಿನ್ಯಾಸ

(ಯುನಿವರ್ಸಲ್ ಡಿಸೈನ್ ಫಾರ್ ಲರ್ನಿಂಗ್ | ಸೆಂಟರ್ ಫಾರ್ ಟೀಚಿಂಗ್ ಇನ್ನೋವೇಶನ್ (cornell.edu) ನಿಂದ ಪಡೆಯಲಾಗಿದೆ)

ಕಲಿಕೆಗಾಗಿ ಸಾರ್ವತ್ರಿಕ ವಿನ್ಯಾಸವು (ಯು.ಡಿ.ಎಲ್) ಒಂದು ಕಲಿಕಾ ವಿಧಾನವಾಗಿದ್ದು ಎಲ್ಲಾ ವಿದ್ಯಾರ್ಥಿಗಳ ಅಗತ್ಯತೆಗಳು ಮತ್ತು ಸಾಮರ್ಥ್ಯಗಳನ್ನು ಒಳಗೊಳ್ಳುವುದಕ್ಕಾಗಿ ಇದು ಕಾರ್ಯ ನಿರ್ವಹಿಸುತ್ತದೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಎದುರಾಗುವ ಅನಗತ್ಯ ಅಡೆತಡೆಗಳನ್ನು ನಿವಾರಿಸುತ್ತದೆ. ಅಂದರೆ ಮಾಹಿತಿಯನ್ನು ಬೇರೆ ಬೇರೆ ವಿಧಗಳಲ್ಲಿ ಪ್ರಸ್ತುತಪಡಿಸಬಹುದಾದ ಹಾಗೂ ಬೇರೆ ಬೇರೆ ರೀತಿಗಳಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿಸಿಕೊಳ್ಳಬಹುದಾದ ನಮ್ಮ ಕಲಿಕಾ ವಾತಾವರಣವನ್ನು ಅಭಿವೃದ್ಧಿಪಡಿಸುವುದು. ಇಲ್ಲಿ ವಿದ್ಯಾರ್ಥಿಗಳಿಗೆ ಕಲಿಕೆಯನ್ನು ಪ್ರದರ್ಶಿಸುವ ಹಲವು ಆಯ್ಕೆಗಳನ್ನು ನೀಡಲಾಗುತ್ತದೆ.

ಯು.ಡಿ.ಎಲ್ ಎನ್ನುವುದು 'ಸಾರ್ವತ್ರಿಕ ಬೋಧನಾ ವಿನ್ಯಾಸ' ಮತ್ತು 'ಬೋಧನೆಯ ಸಾರ್ವತ್ರಿಕ ವಿನ್ಯಾಸ'ದ ತರಹದ್ದೇ ಆಗಿದೆ. ಈ ಎಲ್ಲಾ ಮೂರು ವಿನ್ಯಾಸಗಳು ಎಲ್ಲಾ ವಿದ್ಯಾರ್ಥಿಗಳ ಅಗತ್ಯತೆಗಳು ಮತ್ತು ಸಾಮರ್ಥ್ಯಗಳನ್ನು ಈಡೇರಿಸಲು ಸುಲಭಸಾಧ್ಯವಾಗುವ ಮತ್ತು ಒಳಗೊಳ್ಳುವ ಬೋಧನಾ ವಿಧಾನಗಳನ್ನು ಪ್ರತಿಪಾದಿಸುತ್ತವೆ.

## ಯು.ಡಿ.ಎಲ್ ಅನ್ನು ಏಕೆ ಬಳಸಬೇಕು?

- ಸಾರ್ವತ್ರಿಕ ವಿನ್ಯಾಸದ ತತ್ವಗಳನ್ನು ಅಳವಡಿಸಿಕೊಂಡರೆ ಅದು ಎಲ್ಲವನ್ನೂ ಒಳಗೊಳ್ಳುವ ಕಲಿಕೆಯ ವಾತಾವರಣವನ್ನು ಪ್ರವರ್ಧಿಸುತ್ತದೆ.
- ವಿಶಾಲ ವ್ಯಾಪ್ತಿಯ ಅನೇಕ ವಿಧದ ಅಗತ್ಯತೆಗಳನ್ನು ಒಳಗೊಳ್ಳುವುದಕ್ಕಾಗಿ ಕೋರ್ಸ್ ಒಂದನ್ನು ವಿನ್ಯಾಸಗೊಳಿಸಿದರೆ ಕಲಿಕಾ ಪ್ರಕ್ರಿಯೆಯಲ್ಲಿ ಎದುರಾಗಬಹುದಾದ ಅಡೆತಡೆಗಳು ಅಥವಾ ಅನಗತ್ಯ ಕಲಿಕಾ ಅಡಚಣೆಗಳನ್ನು ನಿವಾರಿಸಬಹುದು. ಇದನ್ನು ಸಾಧಿಸುವುದಕ್ಕಾಗಿ ಕೋರ್ಸ್ ಅನ್ನು ಸದೃಢವಾಗಿ ವಿನ್ಯಾಸಗೊಳಿಸಿದರೆ, ಅದು ಯಾಕಾಗಬಾರದು?
- ವಿದ್ಯಾರ್ಥಿಗಳಿಗೆ ತಮ್ಮ ಕಲಿಕೆಯನ್ನು ಗ್ರಹಿಸಲು, ಅರಿತುಕೊಳ್ಳಲು ಮತ್ತು ವ್ಯಕ್ತಪಡಿಸಲು ಅನೇಕ ವಿಧಾನಗಳನ್ನು ಒದಗಿಸಿದರೆ ಅವರು ತಮಗೆ ಹೆಚ್ಚು ಪ್ರಯೋಜನಕಾರಿಯಾಗುವ ರೀತಿಯಲ್ಲಿ ಸಾಧನಗಳೊಂದಿಗೆ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ, ಹಾಗೂ ಅವರ ಕೌಶಲ್ಯಗಳು ಸದೃಢವಾಗಿಲ್ಲದ ಕ್ಷೇತ್ರದಲ್ಲಿ ಸುಧಾರಣೆಯನ್ನು ಸಾಧಿಸಲು ಈ ಸಾಧನಗಳೊಂದಿಗೆ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ.

## ಯು.ಡಿ.ಎಲ್ ಗಾಗಿ ಪರಿಗಣನೆಗಳು

- ಗ್ರಹಿಕೆಗಾಗಿ ಅವಕಾಶಗಳನ್ನು ಒದಗಿಸಿ - ವಿದ್ಯಾರ್ಥಿಗಳು ಮಾಹಿತಿಯನ್ನು ಭಿನ್ನ ಭಿನ್ನವಾಗಿ ಪಡೆದುಕೊಳ್ಳುತ್ತಾರೆ ಎನ್ನುವ ಹಿನ್ನೆಲೆಯಲ್ಲಿ ಈ ತತ್ವವು, ಮಾಹಿತಿಯನ್ನು ಪ್ರಸ್ತುತಪಡಿಸಲು ನಮ್ಯ ಮತ್ತು ಬಹು ವಿಧಾನಗಳನ್ನು ಒದಗಿಸುತ್ತದೆ ಎನ್ನುವ ಅರ್ಥವನ್ನು ನೀಡುತ್ತದೆ. ಉದಾಹರಣೆಗೆ, ಪವರ್ ಪಾಯಿಂಟ್ ಅನ್ನು ನಿಮ್ಮ ಉಪನ್ಯಾಸಕ್ಕೆ ದೃಶ್ಯ ಪೂರಕ ಸಾಧನವಾಗಿ ಬಳಸುವುದು.

- ಅಭಿವ್ಯಕ್ತಿಗೆ ಆಯ್ಕೆಗಳನ್ನು ಒದಗಿಸುವುದು - ಕಲಿಕೆಯ ಅಭಿವ್ಯಕ್ತಿಯ ವಿಚಾರಕ್ಕೆ ಬಂದರೆ ಪ್ರತೀ ವಿದ್ಯಾರ್ಥಿಯ ಸಾಮರ್ಥ್ಯವೂ  ಭಿನ್ನವಾಗಿರುವುದರಿಂದ, ತಮ್ಮ ಜ್ಞಾನವನ್ನು ವ್ಯಕ್ತಪಡಿಸಲು ಅಥವಾ ತಮ್ಮ ಕೌಶಲ್ಯವನ್ನು ತೋರಿಸಲು ವಿದ್ಯಾರ್ಥಿಗಳಿಗೆ ನಮ್ಯ ಮತ್ತು ಬಹು ವಿಧಾನಗಳನ್ನು ಒದಗಿಸುವುದು ಎನ್ನುವ ಅರ್ಥವನ್ನು ಈ ತತ್ವವು ನೀಡುತ್ತದೆ. ಉದಾಹರಣೆಗೆ, ವಿದ್ಯಾರ್ಥಿಗಳು ಅಂತಿಮ ಪರೀಕ್ಷೆಯನ್ನು ಬರೆಯುವ ಆಯ್ಕೆ  ಅಥವಾ ಅಂತಿಮ ಅಸೈನ್ ಮೆಂಟ್ ಅನ್ನು ಸಲ್ಲಿಸುವ ಆಯ್ಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಹೊಂದಿರುವುದು.
- ಅರಿತುಕೊಳ್ಳುವುದಕ್ಕಾಗಿ ಆಯ್ಕೆಗಳನ್ನು ಒದಗಿಸುವುದು - ವಿವಿಧ ಕಾರಣಗಳಿಗಾಗಿ ಕಲಿಯಲು ವಿದ್ಯಾರ್ಥಿಗಳನ್ನು ಉತ್ತೇಜಿಸುವುದು ಮತ್ತು ಅವರನ್ನು ತೊಡಗಿಸಿಕೊಳ್ಳುವ ಕಲಿಕಾ ಚಟುವಟಿಕೆಗಳ ಪ್ರಕಾರದಲ್ಲಿ ಭಿನ್ನತೆಯನ್ನು ಕಾಪಾಡುವುದು. ಈ ಮೂರನೇ ತತ್ವವು, ಕೋರ್ಸ್ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಬಹು ವಿಧಾನಗಳನ್ನು ಒದಗಿಸುವುದು ಎನ್ನುವ ಅರ್ಥವನ್ನು ನೀಡುತ್ತದೆ. ಉದಾಹರಣೆಗೆ, ವಿದ್ಯಾರ್ಥಿಗಳನ್ನು ಕೇವಲ ವೈಯಕ್ತಿಕ ಕೆಲಸದಲ್ಲಿ ತೊಡಗಿಸಿಕೊಳ್ಳುವ ಬದಲಿಗೆ ಸಾಮೂಹಿಕ ಕಾರ್ಯಚಟುವಟಿಕೆಗಳು ಮತ್ತು ವೈಯಕ್ತಿಕ ಕೆಲಸದಲ್ಲಿ ತೊಡಗಿಸಿಕೊಳ್ಳುವುದು.

ಆಯ್ಕೆಗಳನ್ನು ನೀಡುವುದು ಎಂದರೆ ಕೋರ್ಸ್ ನ ನಿರೀಕ್ಷೆಗಳನ್ನು ಬದಲಾಯಿಸುವುದು ಎಂದಲ್ಲ ಎನ್ನುವುದನ್ನು ನೆನಪಿನಲ್ಲಿಡಿ (ಉದಾ: ಒಂದು ವೇಳೆ ನಿಮ್ಮ ಕೋರ್ಸ್ ನ ಕಲಿಕಾ ಫಲಿತಾಂಶಗಳು ಬರವಣಿಗೆಯಲ್ಲಿ ಸಂವಹನ ಮಾಡುವುದರ ಕಲಿಕೆಯನ್ನು ಒಳಗೊಂಡಿದ್ದರೆ, ಲಿಖಿತ ಅಸೈನ್ ಮೆಂಟ್ ಮೂಲಕ ವಿದ್ಯಾರ್ಥಿಗಳು ತಮ್ಮ ಕಲಿಕೆಯನ್ನು ಪ್ರದರ್ಶಿಸಬೇಕು).

## ಯು.ಡಿ.ಎಲ್ ಜೊತೆಗೆ ಪ್ರಾರಂಭಿಸುವುದು

- ನೀವು ಈಗಾಗಲೇ ಒಂದು ಕೋರ್ಸನ್ನು ವಿನ್ಯಾಸಗೊಳಿಸಿದ್ದರೆ, ಮುಂದೆ ಹೇಗೆ ಸಾಗಬೇಕು ಎಂಬ ಕುರಿತು ಪರ್ಯಾಲೋಚಿಸಿ. ಪ್ರಸ್ತುತ ಯಾವ ಕೋರ್ಸ್ ಚಟುವಟಿಕೆಗಳು, ಬೋಧನಾ ವಿಧಾನಗಳು ಮತ್ತು ಮೌಲ್ಯಮಾಪನಗಳು ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿವೆ? ನಿಮ್ಮ ಬೋಧನಾ ಶೈಲಿ ಯಾವುದು ಮತ್ತು ನಿಮ್ಮ ವಿದ್ಯಾರ್ಥಿಗಳ ಕಲಿಕಾ ವಿಧಾನಗಳೇನು? ಯಾವ ವಿದ್ಯಾರ್ಥಿ ನಿಮ್ಮ ತರಗತಿಯಲ್ಲಿ ಉತ್ತಮ ಸಾಧನೆ ಮಾಡಬಹುದು ಮತ್ತು ಯಾವ ವಿದ್ಯಾರ್ಥಿಯು ಹೆಣಗಾಡಬಹುದು ಎಂಬುದನ್ನು ನಿಮ್ಮನ್ನು ನೀವೇ ಕೇಳಿಕೊಳ್ಳಿ.
- ನೀವು ವಿಷಯವನ್ನು ಪ್ರಸ್ತುತಪಡಿಸುವ ರೀತಿಯಲ್ಲಿ, ನಿಮ್ಮ ಕೋರ್ಸ್ ನಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ರೀತಿಯಲ್ಲಿ, ಮತ್ತು ಅವರನ್ನು ಮೌಲ್ಯಮಾಪನ ಮಾಡುವ ರೀತಿಯಲ್ಲಿ ಇನ್ನಷ್ಟು ನಮ್ಯತೆಯನ್ನು ನೀವು ಒದಗಿಸಬಹುದೇ?
- ವಿದ್ಯಾರ್ಥಿಗಳು ಅಸೈನ್ ಮೆಂಟ್ ವಿಷಯಗಳ ಆಯ್ದ ಭಂಡಾರದಿಂದ ಆರಿಸಬೇಕೇ ಅಥವಾ ಸೆಮಿಸ್ಟರ್ ನ ಆರಂಭದಲ್ಲಿ ಆರಿಸಬೇಕೇ? ಅವರ ಗ್ರೇಡ್ ನ ಎಷ್ಟು ಶೇಕಡಾದಷ್ಟು ಪ್ರಮಾಣವು ನಿರ್ದಿಷ್ಟ ಅಸೈನ್ ಮೆಂಟ್ ವಿಷಯಗಳನ್ನು ಹೊಂದಿಕೊಂಡಿರಬೇಕು ಎಂಬುದನ್ನು ವಿದ್ಯಾರ್ಥಿಗಳೇ ನಿರ್ಧರಿಸಲು ಬಿಡಿ.
- ಪರಿಸ್ಥಿತಿಯು ಹೇಗೆ ಮುಂದುವರಿಯುತ್ತಿದೆ ಎಂಬುದನ್ನು ನಿಮ್ಮ ವಿದ್ಯಾರ್ಥಿಗಳೊಂದಿಗೆ ಪರಿಶೀಲಿಸಿ. ಸೆಮಿಸ್ಟರ್ ಮಧ್ಯದಲ್ಲಿ ಮೌಲ್ಯಮಾಪನವನ್ನು ನಡೆಸಿ ಮತ್ತು/ಅಥವಾ ನಿಮ್ಮ ತರಗತಿಯ ವಾತಾವರಣವು ಎಷ್ಟು ಉತ್ಪಾದಕವಾಗಿದೆ ಎಂಬುದರ ಮೌಲ್ಯಮಾಪನ ನಡೆಸಿ.

- ಯಾವುದೇ ಬೋಧನಾ ಕಾರ್ಯತಂತ್ರವಾಗಿರಲಿ, ಅದು ಹೇಗೆ ಸಾಗಿತು ಎಂಬುದರ ಕುರಿತು ಪರ್ಯಾಲೋಚನೆ ನಡೆಸಿ. ಅದು ನಿಮ್ಮ ಪಾಲಿಗೆ ಚೆನ್ನಾಗಿ ಕಾರ್ಯ ನಿರ್ವಹಿಸಿದೆಯೇ? ನಿಮ್ಮ ವಿದ್ಯಾರ್ಥಿಗಳ ಪಾಲಿಗೆ? ವಿದ್ಯಾರ್ಥಿಗಳಿಗೆ ಕೋರ್ಸ್ ಕಲಿಕೆಯ ಫಲಿತಾಂಶವನ್ನು ಸಾಧಿಸಲು ಸಾಧ್ಯವಾಗಿದೆಯೇ? ನಿಮ್ಮ ಮುಂದಿನ ಸೆಮಿಸ್ಟರ್ ಗೆ ಅಗತ್ಯ ಹೊಂದಾಣಿಕೆಗಳನ್ನು ಮಾಡಿರಿ.

ನಿಮ್ಮ ಕೋರ್ಸ್ ಎಷ್ಟು ಸುಲಭಸಾಧ್ಯ ಎಂಬುದನ್ನು ಪರಿಶೀಲಿಸಲು ಯು.ಡಿ.ಎಲ್ ತತ್ವಗಳು ಮತ್ತು ಅವುಗಳನ್ನು ಹೇಗೆ ಅನ್ವಯಿಸಬಹುದು ಎಂಬುದರ ಬಗೆಗೆ ಇನ್ನಷ್ಟು ತಿಳಿದುಕೊಳ್ಳಿ, ಅಥವಾ ಕೋರ್ಸ್ ಸುಲಭ ಸಾಧ್ಯತೆ ಪರಿಶೀಲನಾ ಪಟ್ಟಿಯನ್ನು ಬಳಸಿ.